# ಮಾರಿಷಿಯಸ್ ಗಣರಾಜ್ಯಕ್ಕೆ ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಭೇಟಿ (ಜುಲೈ 16-17, 2024)

ಜುಲೈ 17, 2024

ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ(ಇಎಂ)ರಾದ ಡಾ.ಎಸ್.ಜೈಶಂಕರ್ ಅವರು 2024ರ ಜುಲೈ 16ರಿಂದ 17ರವರೆಗೆ ಮಾರಿಷಿಯಸ್ ಗಣರಾಜ್ಯಕ್ಕೆ ಅಧಿಕೃತವಾಗಿ ಭೇಟಿ ನೀಡಿದರು. ಪ್ರಸಕ್ತ ಅಧಿಕಾರಾವಧಿಯಲ್ಲಿ ಮಾರಿಷಿಯಸ್‌ಗೆ ವಿದೇಶಾಂಗ ಸಚಿವರ ಮೊದಲ ಭೇಟಿ ಇದಾಗಿತ್ತು. ಪ್ರಧಾನಮಂತ್ರಿ ನರೇಂದ್ರ ಮೋದಿಯವರ ನೇತೃತ್ವದ ನೂತನ ಸರ್ಕಾರದ ಪ್ರಮಾಣ ಸ್ವೀಕಾರ ಸಮಾರಂಭದಲ್ಲಿ ಪಾಲ್ಗೊಳ್ಳಲೆಂದು 2024ರ ಜೂನ್ 09-11ರಂದು ಮಾರಿಷಿಯಸ್ ಪ್ರಧಾನಿ ಗೌರವಾನ್ವಿತ ಶ್ರೀ ಪ್ರವೀಂದ್ ಜುಗ್ನೌತ್ ಅವರು ಭಾರತಕ್ಕೆ ಭೇಟಿ ನೀಡಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ. ಇದಕ್ಕೂ ಮೊದಲು ವಿದೇಶಾಂಗ ಸಚಿವರು 2021ರ ಫೆಬ್ರವರಿಯಲ್ಲಿ ಮಾರಿಷಿಯಸ್‌ಗೆ ಭೇಟಿ ನೀಡಿದ್ದರು.

2. ತಮ್ಮ ಭೇಟಿಯ ಸಂದರ್ಭದಲ್ಲಿ, ವಿದೇಶಾಂಗ ಸಚಿವರು ಅಲ್ಲಿನ ಪ್ರಧಾನ ಮಂತ್ರಿ ಗೌರವಾನ್ವಿತ ಶ್ರೀ ಪ್ರವೀಂದ್ ಕುಮಾರ್ ಜುಗ್ನೌತ್ ಅವರನ್ನು ಭೇಟಿಯಾಗಿ, ದ್ವಿಪಕ್ಷೀಯ ಬಾಂಧವ್ಯದ ಸಂಪೂರ್ಣ ವ್ಯಾಪ್ತಿಯನ್ನು ಪರಿಶೀಲಿಸಿದರು ಮತ್ತು ಉಭಯ ದೇಶಗಳ ನಡುವಿನ ವಿಶೇಷ ಮತ್ತು ಆತ್ಮೀಯ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸುವ ದಾರಿಗಳ ಬಗ್ಗೆಯೂ ಮಾತುಕತೆ ನಡೆಸಿದರು. ಈ ಸಂದರ್ಭದಲ್ಲಿ ಅಲ್ಲಿನ ಹಣಕಾಸು, ಆರ್ಥಿಕ ಯೋಜನೆ ಮತ್ತು ಅಭಿವೃದ್ಧಿ ಸಚಿವರಾದ ಶ್ರೀ ರೆಂಗನಾದೇನ್ ಪಡಯಾಚಿ, ಕೈಗಾರಿಕಾಭಿವೃದ್ಧಿ, ಎಸ್ಎಂಇಗಳು ಮತ್ತು ಸಹಕಾರ ಸಚಿವರಾದ ಶ್ರೀ ಸೂಮಿಲ್‌ದತ್ ಭೋಲಾಹ್ ಮತ್ತು ವಿದೇಶಾಂಗ ವ್ಯವಹಾರಗಳ ಸಚಿವರು ಮತ್ತು ಅಟಾರ್ನಿ ಜನರಲ್ ಶ್ರೀ ಮನೀಶ್ ಗೋಬಿನ್ ಅವರೂ ಉಪಸ್ಥಿತರಿದ್ದರು.

3. ಅದ್ಭುತವಾದ ಮತ್ತು ಜನ-ಕೇಂದ್ರಿತವಾದ ಭಾರತ-ಮಾರಿಷಿಯಸ್ ಅಭಿವೃದ್ಧಿ ಸಹಕಾರದ ಕುರಿತು ಬೆಳಕು ಚೆಲ್ಲಿದ ಪ್ರಧಾನಮಂತ್ರಿ ಜುಗ್ನೌತ್ ಮತ್ತು ವಿದೇಶಾಂಗ ಸಚಿವರು ವರ್ಚುವಲ್ ಆಗಿ ಭಾರತದ ನೆರವಿನಿಂದ ಕೈಗೊಳ್ಳಲಾದ 12 ಸಮುದಾಯ ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಿದರು. ಗ್ರ್ಯಾಂಡ್ ಬೋಯಿಸ್‌ನಲ್ಲಿ ಮೆಡಿಕ್ಲಿನಿಕ್ ಹಾಗೂ ಮೊದಲ ಸಾಗರೋತ್ತರ ಜನೌಷಧಿ ಕೇಂದ್ರವನ್ನು ಉದ್ಘಾಟಿಸುವ ಮೂಲಕ ಅವರು, ವಿಶೇಷವಾಗಿ ಆರೋಗ್ಯದಂಥ ಪ್ರಮುಖ ಕ್ಷೇತ್ರದಲ್ಲಿ ನಮ್ಮ ದೇಶಗಳ ನಡುವಿನ ಆತ್ಮೀಯ ಸಹಕಾರಕ್ಕೆ ಸಾಕ್ಷಿಯಾದರು. ಇದರ ಜೊತೆಗೆ ಉಭಯ ನಾಯಕರು ಭಾರತ-ಮಾರಿಷಿಯಸ್ ಜಂಟಿ ಉಪಗ್ರಹ ಅಭಿವೃದ್ಧಿ, ವಲಸೆ ದಾಖಲೆಗಳ ಡಿಜಿಟಲೀಕರಣ, ಶಿಕ್ಷಣ ಮತ್ತು ಸಂಸ್ಕೃತಿ ಸೇರಿದಂತೆ ವಿವಿಧ ವಲಯಗಳಲ್ಲಿ ಹಲವಾರು ದ್ವಿಪಕ್ಷೀಯ ಒಪ್ಪಂದಗಳಿಗೆ ಮತ್ತು ಅಧಿಕೃತ ದಾಖಲೆಗಳಿಗೂ ಸಾಕ್ಷಿಯಾದರು. 7ನೇ ತಲೆಮಾರಿನ ಮೊದಲ ಎರಡು ಮಾರಿಷಿಯಸ್ ನಾಗರಿಕರಿಗೆ ವಿದೇಶಾಂಗ ಸಚಿವರು ಒಸಿಐ ಕಾರ್ಡ್‌ಗಳನ್ನು ಹಸ್ತಾಂತರಿಸಿದರು. ಜೊತೆಗೆ ನೇವಿಗೇಷನಲ್ ಚಾರ್ಟ್‌ಗಳ ಮಾರಾಟಕ್ಕೆ ಸಂಬಂಧಿಸಿದ ದ್ವಿಪಕ್ಷೀಯ ಒಪ್ಪಂದದ ಅನ್ವಯ, ನಾಟಿಕಲ್ ಚಾರ್ಟ್‌ಗಳ ಮಾರಾಟಕ್ಕಾಗಿ ರಾಯಧನದ ಚೆಕ್ ಅನ್ನೂ ಹಸ್ತಾಂತರಿಸಿದರು.

4. ಪ್ಯಾಂಪಲ್‌ಮೌಸಸ್ ಬೊಟ್ಯಾನಿಕಲ್ ಗಾರ್ಡನ್‌ನಲ್ಲಿರುವ ಸರ್ ಸೀವೂಸಾಗರ್ ರಾಮ್‌ಗೂಲಾಮ್ ಮತ್ತು ಸರ್ ಅನೀರೂದ್ ಜುಗ್ನೌತ್ ಸ್ಮಾರಕಕ್ಕೂ ವಿದೇಶಾಂಗ ಸಚಿವರು ಭೇಟಿ ನೀಡಿ, ಗೌರವ ನಮನ ಸಲ್ಲಿಸಿದರು.

5. ಈ ಪ್ರವಾಸದ ವೇಳೆ ವಿದೇಶಾಂಗ ಸಚಿವರು ಮಾರಿಷಿಯಸ್‌ನ ಪ್ರಮುಖ ನಾಯಕರನ್ನು ಭೇಟಿಯಾದರು. ಭಾರತ ಮತ್ತು ಮಾರಿಷಿಯಸ್ ನಡುವಿನ ದೀರ್ಘಾವಧಿಯ ಮತ್ತು ವಿಶ್ವಾಸಾರ್ಹ ಪಾಲುದಾರಿಕೆಯನ್ನು ಬಲಪಡಿಸುವಲ್ಲಿ ಭಾರತವು ನಿರಂತರವಾಗಿ ಬದ್ಧವಾಗಿದೆ ಎಂದು ಒತ್ತಿ ಹೇಳಿದರು.

6. ವಿದೇಶಾಂಗ ಸಚಿವರ ಈ ಭೇಟಿಯು, ಭಾರತದ 'ನೆರೆಹೊರೆಯವರೇ ಮೊದಲು' ನೀತಿ ಮತ್ತು ವಿಷನ್ ಸಾಗರ್‌ನ ಮಹತ್ವದ ಆಧಾರ ಸ್ತಂಭವಾಗಿ ಮಾರಿಷಿಯಸ್‌ಗೆ ಭಾರತ ನೀಡುತ್ತಿರುವ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದೆ. ಈ ಭೇಟಿಯು ಬಹು-ಆಯಾಮದ ದ್ವಿಪಕ್ಷೀಯ ಬಾಂಧವ್ಯವನ್ನು ಬಲಪಡಿಸುವಲ್ಲಿ ಮತ್ತು ಎರಡೂ ದೇಶಗಳ ಜನರ ನಡುವಿನ ಆತ್ಮೀಯ ಸಂಬಂಧವನ್ನು ಆಳವಾಗಿಸುವಲ್ಲಿ ಉಭಯ ರಾಷ್ಟ್ರಗಳು ಹೊಂದಿರುವ ಬದ್ಧತೆಯನ್ನು ದೃಢಪಡಿಸಿದೆ. ಭಾರತ ಮತ್ತು ಮಾರಿಷಿಯಸ್ ಸದಾ ಸ್ಥಿರ ಪಾಲುದಾರರಾಗಿ ಇರಲಿದ್ದು, ಉಭಯ ದೇಶಗಳು ಮತ್ತು ವಿಶಾಲವಾದ ಹಿಂದೂ ಮಹಾಸಾಗರ ಪ್ರದೇಶದ ಸಮೃದ್ಧಿ ಮತ್ತು ಅಭಿವೃದ್ಧಿಗೆ ಬದ್ಧವಾಗಿವೆ.

ನವದೆಹಲಿ

**ಜುಲೈ 17, 2024**